## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 107 |
| ಸದಸ್ಯರ ಹೆಸರು | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 05.12.2023 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>(ಅ)</td><td>ಉಪ ನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ತುಮಕೂರು ವತಿಯಿಂದ ಮಳವಳ್ಳಿಯಿಂದ ಪಾವಗಡ ವರೆಗೆ ರಸ್ತೆ ಕಾಮಗಾರಿ ಸಂಬಂಧ ಯಾವ ಸಂಸ್ಥೆಗೆ ಕಟ್ಟಡ ಕಲ್ಲಿನ ಉಪ ಖನಿಜಕ್ಕಾಗಿ ಕಲ್ಲು ಗಣಿ ಗುತ್ತಿಗೆ ನೀಡಲಾಗಿತ್ತು; ನೀಡಿದ್ದಲ್ಲಿ ಯಾವ ಅವಧಿಯವರೆಗೆ ನೀಡಲಾಗಿದೆ; (ಸಂಪೂರ್ಣ ವಿವರ ನೀಡುವುದು)</td><td>ಮಳವಳ್ಳಿಯಿಂದ ಪಾವಗಡ ವರೆಗೆ ರಸ್ತೆ ಕಾಮಗಾರಿಗೆ ಅಗತ್ಯವಿರುವ ಕಟ್ಟಡ ಕಲ್ಲಿನ ಪೂರೈಕೆಗಾಗಿ ಮೆ|| ಸದ್ಭಾವ್ ಇಂಜಿನಿಯರಿಂಗ್ ಪ್ರೈ. ಲಿ., ಡೈರೆಕ್ಟರ್: ರಸೀಕ್ ಲಾಲ್ ಪಾಟೀಲ್ ರವರಿಗೆ ಒಟ್ಟು 03 ಕಲ್ಲುಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿತ್ತು. ವಿವರ ಕೆಳಕಂಡಂತಿದೆ:<br><table><tr><th>ಕ್ರ. ಸಂ</th><th>ಕಗಗು ಸಂಖ್ಯೆ</th><th>ಗುತ್ತಿಗೆ ಮಂಜೂರಾದ ದಿನಾಂಕ</th><th>ಅವಧಿ</th></tr><tr><td>1</td><td>842</td><td>17.07.2015</td><td>03 ವರ್ಷ</td></tr><tr><td>2</td><td>843</td><td>17.07.2015</td><td>03 ವರ್ಷ</td></tr><tr><td>3</td><td>844</td><td>17.07.2015</td><td>03 ವರ್ಷ</td></tr></table></td></tr>
<tr><td>(ಆ)</td><td>ಸದರಿ ಸಂಸ್ಥೆಗೆ ತುಮಕೂರು ಜಿಲ್ಲೆಯ ಯಾವ ತಾಲ್ಲೂಕು ಗಳಲ್ಲಿ ಕಟ್ಟಡ ಕಲ್ಲಿನ ಉಪ ಖನಿಜಕ್ಕಾಗಿ ಕಲ್ಲು ಗಣಿ ಗುತ್ತಿಗೆ ನೀಡಲಾಗಿದೆ; (ತಾಲ್ಲೂಕು / ಗ್ರಾಮ / ಸರ್ವೆ ನಂ. / ವಿಸ್ತೀರ್ಣ / ಗುತ್ತಿಗೆ ಸಂಖ್ಯೆಯೊಂದಿಗೆ ವಿವರ ನೀಡುವುದು)</td><td>ಮೆ|| ಸದ್ಭಾವ್ ಇಂಜಿನಿಯರಿಂಗ್ ಪ್ರೈ. ಲಿ., ಡೈರೆಕ್ಟರ್: ರಸೀಕ್ ಲಾಲ್ ಪಾಟೀಲ್ ರವರಿಗೆ ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಈ ಕೆಳಕಂಡ ತಾಲ್ಲೂಕುಗಳಲ್ಲಿ ಕಲ್ಲುಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿತ್ತು.<br><table><tr><th>ಕ್ರ. ಸಂ</th><th>ಗುತ್ತಿಗೆ ಸಂಖ್ಯೆ</th><th>ತಾಲ್ಲೂಕು</th><th>ಗ್ರಾಮ</th><th>ಸರ್ವೆ ನಂ.</th><th>ವಿಸ್ತೀರ್ಣ (ಎ/ಗು)</th></tr><tr><td>1</td><td>842</td><td>ಕುಣಿಗಲ್</td><td>ದೊಡ್ಡ ಮಾವತ್ತೂರು</td><td>94/97</td><td>11-00</td></tr><tr><td>2</td><td>843</td><td>ಕೊರಟಗೆರೆ</td><td>ದಾಸರಹಳ್ಳಿ</td><td>81</td><td>6-15</td></tr><tr><td>3</td><td>844</td><td>ಮಧುಗಿರಿ</td><td>ನೆಲ್ಲಕಾಮನ ಹಳ್ಳಿ</td><td>81</td><td>10-00</td></tr></table></td></tr>
</table>

. . . 2

| | | |
|---|---|---|
| (ಇ) | ಗುತ್ತಿಗೆ ಪಡೆದ ಸಂಸ್ಥೆಯವರು ಕಲ್ಲು ಗಣಿ ಗುತ್ತಿಗೆ ಪ್ರದೇಶಗಳಿಂದ ಉಪ ಖನಿಜ (ಕಟ್ಟಡ ಕಲ್ಲು) ಪ್ರಮಾಣಕ್ಕೆ ಅನುಗುಣವಾಗಿ ಸರ್ಕಾರಕ್ಕೆ ಹಣವನ್ನು ಪಾವತಿಸಿದ್ದಾರೆಯೇ; ಪಾವತಿಸಿದ್ದಲ್ಲಿ, ಆ ಮೊತ್ತ ಎಷ್ಟು; ಬಾಕಿ ಇದ್ದಲ್ಲಿ, ಬಾಕಿ ಮೊತ್ತ ಎಷ್ಟು; (ಸಂಪೂರ್ಣ ವಿವರ ನೀಡುವುದು) | ಕಲ್ಲುಗಣಿ ಗುತ್ತಿಗೆದಾರರು ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಉತ್ಪಾದಿಸಿ ಸಾಗಾಣಿಕೆ ಮಾಡಿದ ಪ್ರಮಾಣಕ್ಕೆ ಅನುಗುಣವಾಗಿ ರಾಜಧನ ಪಾವತಿಸಿರುವುದಿಲ್ಲ.<br><br>**1. ಕಲ್ಲುಗಣಿ ಗುತ್ತಿಗೆ ಸಂಖ್ಯೆ-842**<br>2015-16ನೇ ಸಾಲಿನಿಂದ 2017-18ನೇ ಸಾಲಿನವರೆಗೆ ಗಣಿಗಾರಿಕೆ ನಡೆಸಿದ್ದು, ಒಟ್ಟು 14,07,100 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಸಾಗಾಣಿಕೆ ಮಾಡಿದ್ದು, ಸದರಿ ಪ್ರಮಾಣದಲ್ಲಿ 3,77,234 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಪರವಾನಗಿ ಪಡೆದು ಹಾಗೂ 10,29,865 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಖನಿಜ ರವಾನೆ ಪರವಾನಗಿ ಪಡೆಯದೆ ಸಾಗಾಣಿಕೆ ಮಾಡಿರುತ್ತಾರೆ. ಸದರಿ ಗುತ್ತಿಗೆದಾರರು ಒಟ್ಟು ರಾಜಧನ ₹7,23,36,180/- ಗಳನ್ನು ಪಾವತಿಸಿರುತ್ತಾರೆ. ಗುತ್ತಿಗೆದಾರರು ಖನಿಜ ರವಾನೆ ಪಡೆಯದೆ 10,29,865 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಸಾಗಾಣಿಕೆ ಮಾಡಿದ್ದು, ಈ ಸಂಬಂಧ 2015-16 ರಿಂದ 2017-18 ನೇ ಸಾಲಿನವರೆಗೆ ಒಟ್ಟು ₹49,24,50,705/- ಗಳ ದಂಡವನ್ನು ವಿಧಿಸಲಾಗಿರುತ್ತದೆ. 2022-23ನೇ ಸಾಲಿನ ಅಂತ್ಯಕ್ಕೆ ಸದರಿ ದಂಡದ ಮೊತ್ತ ಹಾಗೂ ಬಡ್ಡಿ ಸೇರಿ ಒಟ್ಟು ₹66,92,55,673/- ಗಳನ್ನು ಪಾವತಿಸುವಂತೆ ನೋಟೀಸ್ ಜಾರಿ ಮಾಡಲಾಗಿರುತ್ತದೆ.<br><br>**2. ಕಲ್ಲುಗಣಿ ಗುತ್ತಿಗೆ ಸಂಖ್ಯೆ-843**<br>2015-16ನೇ ಸಾಲಿನಿಂದ 2017-18ನೇ ಸಾಲಿನವರೆಗೆ ಗಣಿಗಾರಿಕೆ ನಡೆಸಿದ್ದು, ಒಟ್ಟು 3,90,000 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಸಾಗಾಣಿಕೆ ಮಾಡಿದ್ದು, ಸದರಿ ಪ್ರಮಾಣದಲ್ಲಿ 1,56,500 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಪರವಾನಗಿ ಪಡೆದು ಹಾಗೂ 2,33,500 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಖನಿಜ ರವಾನೆ ಪರವಾನಗಿ ಪಡೆಯದೆ ಸಾಗಾಣಿಕೆ ಮಾಡಿರುತ್ತಾರೆ. ಸದರಿ ಗುತ್ತಿಗೆದಾರರು ಒಟ್ಟು ₹1,56,19,380/- ಗಳ ಮೊತ್ತವನ್ನು ಪಾವತಿಸಿರುತ್ತಾರೆ. ಸದರಿಯವರು ಖನಿಜ ರವಾನೆ ಪಡೆಯದೆ 2,33,500 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಸಾಗಾಣಿಕೆ ಮಾಡಿದ್ದು, ಈ ಸಂಬಂಧ 2015-16 ರಿಂದ 2017-18ನೇ ಸಾಲಿನವರೆಗೆ ಒಟ್ಟು ₹12,66,03,000/- ದಂಡವನ್ನು ವಿಧಿಸಲಾಗಿರುತ್ತದೆ. 2022-23ನೇ ಸಾಲಿನ ಅಂತ್ಯಕ್ಕೆ ಸದರಿ ದಂಡದ ಮೊತ್ತ ಹಾಗೂ ಬಡ್ಡಿ ಸೇರಿ ಒಟ್ಟು ₹22,32,20,616/- ಗಳನ್ನು ಪಾವತಿಸುವಂತೆ ನೋಟೀಸ್ ಜಾರಿ ಮಾಡಲಾಗಿರುತ್ತದೆ.<br><br>**3. ಕಲ್ಲುಗಣಿ ಗುತ್ತಿಗೆ ಸಂಖ್ಯೆ-844**<br>2015-16ನೇ ಸಾಲಿನಿಂದ 2016-17ನೇ ಸಾಲಿನವರೆಗೆ ಗಣಿಗಾರಿಕೆ ನಡೆಸಿದ್ದು, ಒಟ್ಟು 2,82,132 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಸಾಗಾಣಿಕೆ ಮಾಡಿರುತ್ತಾರೆ. ಸದರಿ - |

| | | |
|---|---|---|
| | | -ಪ್ರಮಾಣದಲ್ಲಿ 95,333 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಪರವಾನಿಗೆ ಪಡೆದು ಹಾಗೂ 1,86,799 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಪರವಾನಗಿ ಪಡೆಯದೆ ಸಾಗಾಣಿಕೆ ಮಾಡಿರುತ್ತಾರೆ. ಸದರಿ ಗುತ್ತಿಗೆದಾರರು ಒಟ್ಟು ₹1,13,42,130/-ಗಳ ಮೊತ್ತವನ್ನು ಪಾವತಿಸಿರುತ್ತಾರೆ. ಸದರಿಯವರು ಖನಿಜ ರವಾನೆ ಪಡೆಯದೆ 1,86,799 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಸಾಗಾಣಿಕೆ ಮಾಡಿದ್ದು, ಈ ಸಂಬಂಧ 2015-16 ರಿಂದ 2016-17ನೇ ಸಾಲಿನವರೆಗೆ ಒಟ್ಟು ₹12,44,16,900/- ದಂಡವನ್ನು ವಿಧಿಸಲಾಗಿರುತ್ತದೆ. 2022-23ನೇ ಸಾಲಿನ ಅಂತ್ಯಕ್ಕೆ ಸದರಿ ದಂಡದ ಮೊತ್ತ ಹಾಗೂ ಬಡ್ಡಿ ಸೇರಿ ಒಟ್ಟು ₹23,21,77,586/- ಗಳನ್ನು ಪಾವತಿಸುವಂತೆ ನೋಟೀಸ್ ಜಾರಿ ಮಾಡಲಾಗಿರುತ್ತದೆ. |
| (ಈ) | ಬಾಕಿ ಇದ್ದಲ್ಲಿ, ಎಷ್ಟು ವರ್ಷ ಗಳಿಂದ ಬಾಕಿ ಉಳಿಸಿಕೊಳ್ಳಲಾಗಿದೆ; ಬಾಕಿ ಮೊತ್ತ ವಸೂಲು ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ➢ ಕಂಡಿಕೆ-(ಇ) ರಲ್ಲಿ ವಿವರಿಸಿರುವಂತೆ, ಸದರಿ 03 ಕಲ್ಲುಗಣಿ ಗುತ್ತಿಗೆಗಳಿಗೆ ಸಂಬಂಧಿಸಿದ ಬಾಕಿ ಮೊತ್ತವನ್ನು ಪಾವತಿಸುವಂತೆ ಗುತ್ತಿಗೆದಾರರಾಗಿದ್ದ ಮೆ\|\| ಸದ್ಭಾವ್ ಇಂಜಿನಿಯರಿಂಗ್ ಪ್ರೈ. ಲಿ., ಡೈರೆಕ್ಟರ್: ರಸೀಕ್ ಲಾಲ್ ಪಾಟೀಲ್ ರವರಿಗೆ ನೋಟೀಸ್ ಜಾರಿ ಮಾಡಲಾಗಿರುತ್ತದೆ. ಆದರೆ ಗುತ್ತಿಗೆದಾರರು ಬಾಕಿ ಮೊತ್ತವನ್ನು ಪಾವತಿಸಿರುವುದಿಲ್ಲ.<br>➢ ಆದ್ದರಿಂದ ಸಕ್ಷಮ ಪ್ರಾಧಿಕಾರಿಯಾದ ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ತುಮಕೂರು ರವರು ಸದರಿ ಬಾಕಿಯನ್ನು ಭೂಕಂದಾಯ ಬಾಕಿ ಎಂದು ಪರಿಗಣಿಸಿ, ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 39 ರಂತೆ ಆರ್. ಆರ್. ಸಿ ಜಾರಿ ಮಾಡಿ ಬಾಕಿಯನ್ನು ಸಂಗ್ರಹಿಸಲು ಕೋರಿ ಜಿಲ್ಲಾ ಕಲೆಕ್ಟರ್, ಅಹಮದಾಬಾದ್, ಗುಜರಾತ್ ರಾಜ್ಯ ರವರಿಗೆ ದಿನಾಂಕ 27.11.2023 ರಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ. |

ಸಂಖ್ಯೆ ಸಿಐ -ಎಂಎಂಎನ್/235/2023

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.